ಗಳು ಕೆಟ್ಟಾಗ ಯಾವ ಸ್ಥಿತಿಯಲ್ಲಿರುತ್ತವೆ ಎನ್ನುವ ಬಗೆಗಿನ ವಿವರಗಳು ಇರುತ್ತವೆ. ಇದರ ಬಗ್ಗೆ ಯಾವ ಸಂಶಯ ಮಾನ್ಯ ಸದಸ್ಯರಿಗೆ ಬೇಕಾಗಿಲ್ಲ, ಇದನ್ನೆಲ್ಲಾ ಗಮನಿಸಿ ಇದರ ಬಗ್ಗೆ ಸೂಕ್ತಕ್ರಮ ಕೈಗೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಚ್. ಜಿ. ಗೋವಿಂದ ಗೌಡ.—ಈ ಪ್ರಶ್ನೆ ನಂ. (ಕೆ೮೭)ಗೆ ಇನ್ನೂ ಹೆಚ್ಚು ವಿವರಗಳ ಆವಶ್ಯಕತೆ ಇದೆ. ಆದ್ದರಿಂದ ಇದನ್ನು ದಯಮಾಡಿ ತಡೆಹಿಡಿಯುವುದರ ಜೊತೆಗೆ ಮುಂದೆ ಇದನ್ನು ತೆಗೆದುಕೊಳ್ಳಬಹುದು.

ಶ್ರೀ ಎಂ. ರಾಮಪ್ಪ.—ಯಾವಾಗ ಈ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೀರಾ ? ಈ ಅಧಿವೇಶನ ಮುಗಿಯುವುದರೊಳಗೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಈ ಅಧಿವೇಶನ ಮುಗಿಯುವುದರೊಳಗಾಗಿ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೫೯೮ (೧೦೪೬) ಮಾನ್ಯ ಸದಸ್ಯರಾದ ಶ್ರೀ ಮಹಮ್ಮದ್ ಲೈಕುದ್ದೀನ್ ——ಹಾಜರಿರಲಿಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. ೫೯೯ (೧೦೫೨) ಮಾನ್ಯ ಸದಸ್ಯರಾದ ಶ್ರೀ ಬಿ. ಜೆ. ಕೊಟ್ರಪ್ಪ——ಹಾಜರಿಲಿಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. ೬೦೦ (೧೦೭೯) ಮಾನ್ಯ ಸದಸ್ಯರಾದ ಶ್ರೀ ಡಿ. ಎ. ಚಿನ್ನಪ್ಪ——ಹಾಜರಿರಲಿಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. ೬೦೧ (೧೦೮೭) ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ್——ಹಾಜರಿರಲ್ಲ.

ಕೃಷಿ ತರಬೇತಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು

೧೧೯೮. ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕೃಷಿ ತರಬೇತಿ ಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಅವರಿಗೆ ದೊರಕುತ್ತಿರುವ ಮಾಸಿಕ ವೇತನ ಎಷ್ಟು ?

ಇ) ಈಗ ಇರುವ ಮಾಸಿಕ ವೇತನವನ್ನು ಏರಿಸುವುದರ ಬಗ್ಗೆ ಸರ್ಕಾರದವರು ಏನಾದರೂ ನಿರ್ಧಾರ ಕೈಗೊಂಡಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) ೧೯೮೫–೮೬ನೇ ಸಾಲಿನಲ್ಲಿ ಒಟ್ಟು ೬೦೦ ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

ಆ) ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿ ತಿಂಗಳಿಗೆ ೧೫೦ ರೂ. ಗಳ ತರಬೇತಿ ಭತ್ಯೆ ನೀಡಲಾಗುತ್ತಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಸವರಾಜ್.—ಈ ತರಬೇತಿ ಪಡೆಯುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾಹೆಯಾನ ೧೫೦ ರೂಪಾಯಿಗಳನ್ನು ಕೊಡುತ್ತಿರುವುದಾಗಿ ಮಾನ್ಯ ಸಚಿವರು ಈಗತಾನೇ ಹೇಳಿದ್ದಾರೆ. ಮತ್ತೆ ಅದನ್ನು ಹೆಚ್ಚು ಮಾಡುವ ಬಗ್ಗೆಯೂ ಕೂಡ ಪರಿಶೀಲನೆಯಲ್ಲಿದೆ ಎಂತಲೂ ತಿಳಿಸಿದ್ದಾರೆ. ಅದನ್ನು ವರ್ಷದಿಂದಲೇ ಜಾರಿಗೆ ಕೊಡುತ್ತೀರಾ ಎಂಬುದಾಗಿ ಕೇಳಬಯಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಈ ವಿಚಾರದಲ್ಲಿ ೧೫೦ ರೂ. ಗಳನ್ನು ಏನು ಮಾಸಿಕ ಭತ್ಯೆ ಕೊಡುತ್ತಿದ್ದೇವೆ ಅದು ಕಡಿಮೆ ಎಂಬುದಾಗಿ ಸರ್ಕಾರ ಈಗಾಗಲೇ ತೀರ್ಮಾನ ಮಾಡಿ, ಅದನ್ನು ಸಹಾನುಭೂತಿಯಿಂದ, ೨೦೦ ರೂ. ಗಳಿಗೆ ಹೆಚ್ಚು ಮಾಡುವ ರೀತಿಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಒಂದು ವೇಳೆ ಅದು ಜಾರಿಗೆ ಬರುವುದಿದ್ದರೂ ಮುಂದಿನ ವರ್ಷದಿಂದ ಮಾತ್ರ ಸಾಧ್ಯ.

ಕಾರಣ ತರಬೇತಿ ಈಗಾಗಲೇ ಪ್ರಾರಂಭವಾಗಿದ್ದು, ತರಬೇತಿಯ ಮಧ್ಯದಲ್ಲಿ ಅದನ್ನು ಕೊಡುವ ಹಾಗೆ ಇಲ್ಲ.